MAY 24, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

**ಫಿಟ್ ಇಂಡಿಯಾ ಸಂಡೇಸ್ ಆನ್ ಬೈಸಿಕಲ್;** ಧಾರವಾಡ ಸೇರಿದಂತೆ, ದೇಶದ 8 ಸಾವಿರ ಸ್ಥಳಗಳಲ್ಲಿ ಇಂದು, ಜನ ಜಾಗೃತಿ ಜಾಥಾ.

**81ಕ್ಕೂ ಹೆಚ್ಚು, ಉದ್ಯೋಗ ವಲಯಗಳ,** ಅಸಂಘಟಿತ ಹಾಗೂ ಗಿಗ್ ಕಾರ್ಮಿಕರಿಗೆ, ರಾಜ್ಯ ಸರ್ಕಾರದಿಂದ, ಶೇಕಡ 60 ರಷ್ಟು ವೇತನ ಹೆಚ್ಚಳ.

**ಹೊಸ ದಿಲ್ಲಿಯ ಕೆಂಪುಕೋಟೆಯಲ್ಲಿ ಇಂದು,** ವನವಾಸಿಗಳ, ಜನಜಾತೀಯ ಸಾಂಸ್ಕೃತಿಕ ಸಮಾಗಮ.

**'ಕಳಂಕ ನಿವಾರಿಸು; ತಿಳಿವಳಿಕೆ ಬೆಳೆಸು' ಧ್ಯೇಯದೊಂದಿಗೆ,** ಇಂದು, ವಿಶ್ವ ಸ್ಕಿಜೋಫ್ರೇನಿಯಾ, ಜಾಗೃತಿ ದಿನ.

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪರಿಕಲ್ಪನೆಯ,** ಫಿಟ್ ಇಂಡಿಯಾ ಸಂಡೇಸ್ ಆನ್ ಬೈಸಿಕಲ್, 75 ನೇ ಆವೃತ್ತಿಯ ಅಭಿಯಾನ, ಧಾರವಾಡ ಸೇರಿದಂತೆ, ದೇಶದ 8 ಸಾವಿರಕ್ಕೂ ಅಧಿಕ ಸ್ಥಳಗಳಲ್ಲಿ, ಇಂದು ಜರುಗಲಿದೆ. ಅಹಮದಾಬಾದ್‌ನಲ್ಲಿ ಜರುಗಲಿರುವ, 2030ರ ಕಾಮನವೆಲ್ತ್ ಕ್ರೀಡಾಕೂಟದ, ಶತಮಾನೋತ್ಸವದ ಸ್ಮರಣಾರ್ಥ, ಗುಜರಾತಿನ ಸಬರಮತಿ ನದಿ ತೀರದಲ್ಲಿ, ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಖಾತೆ ಸಚಿವ, ಮನ್ಸುಖ್ ಮಾಂಡವೀಯ, ಫಿಟ್ ಇಂಡಿಯಾ ಸಂಡೇಸ್ ಆನ್ ಬೈಸಿಕಲ್ ಗೆ, ಇಂದು ಚಾಲನೆ ನೀಡಲಿದ್ದಾರೆ.

<><><>

**ರಾಜ್ಯ ಸರ್ಕಾರ, ಕಾರ್ಮಿಕರ ಕನಿಷ್ಠ** ವೇತನವನ್ನು, ಸರಾಸರಿ ಶೇಕಡ 60ರಷ್ಟು ಹೆಚ್ಚಿಸಿದ್ದು, ರಾಜ್ಯದ ಒಂದು ಕೋಟಿಗೂ ಅಧಿಕ ಕಾರ್ಮಿಕರಿಗೆ, ಆರ್ಥಿಕ ನೆರವು ದೊರಕಲಿದೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ ತಿಳಿಸಿದ್ದಾರೆ. ನೂತನ ಕನಿಷ್ಠ ವೇತನ ಜಾರಿಯಿಂದ, ರಾಜ್ಯ ಕಾರ್ಮಿಕರ ವಿಮೆ – ಇ.ಎಸ್.ಐ ಮತ್ತು ಭವಿಷ್ಯ ನಿಧಿ – ಪಿ.ಎಫ್. ಕಡಿತದ ಬಳಿಕ, ದೊರಕುತ್ತಿದ್ದ ಕಡಿಮೆ ವೇತನದ ಬದಲಾಗಿ, ಪರಿಷ್ಕೃತ ಸಂಚಿತ ವೇತನ ಕೈಗೆ ಸಿಗಲಿದೆ ಎಂದರು. ಅಸಂಘಟಿತ ವಲಯದ ಗಿಗ್ ಕಾರ್ಮಿಕರು, ನಿರ್ದಿಷ್ಟ ವಲಯಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು, ಖಾಸಗಿ ಶಾಲೆ–ಕಾಲೇಜುಗಳ ಬೋಧಕೇತರ ಸಿಬ್ಬಂದಿ, ಇ–ಕಾಮರ್ಸ್ ಕ್ಷೇತ್ರದ ನೌಕರರು, ಕೊರಿಯರ್ ಸಂಸ್ಥೆಗಳ ಸಿಬ್ಬಂದಿ ಹಾಗೂ ಧಾರ್ಮಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವ ನೌಕರರು ಸೇರಿದಂತೆ, ಒಟ್ಟಾರೆ ರಾಜ್ಯದ 81ಕ್ಕೂ ಹೆಚ್ಚು ಅನುಸೂಚಿತ ಉದ್ಯೋಗ ವಲಯಗಳ ಕಾರ್ಮಿಕರಿಗೆ ಇದರ ಲಾಭ ದೊರೆಯಲಿದೆ ಎಂದು, ಸಚಿವ ಲಾಡ ಹೇಳಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದನ್ವಯ, ವೇತನ ಪರಿಷ್ಕರಣೆ ಕೈಗೊಂಡು, ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

<><><>

**3 ಸಾವಿರದ 300 ಕೋಟಿ ರೂಪಾಯಿ ವೆಚ್ಚದಲ್ಲಿ,** ಮಂಗಳೂರು, ಶಿವಮೊಗ್ಗ ಹಾಗೂ ಶೃಂಗೇರಿ ಮಧ್ಯದ ರೈಲು ಮಾರ್ಗದ ಅಭಿವೃದ್ಧಿ ಕೈಗೆತ್ತಿಕೊಳ್ಳಲಾಗುವುದು ಎಂದು, ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದ್ದಾರೆ. ಮಂಗಳೂರು ರೇಲ್ವೆ ಕಚೇರಿಯಲ್ಲಿ, ರೇಲ್ವೆ ಯೋಜನೆಗಳ ಪ್ರಗತಿ ಪರಿಶೀಲಿಸಿ ಅವರು ಮಾತನಾಡಿದರು. ರಾಜ್ಯದಲ್ಲಿ 37 ನೂತನ ರೈಲುಗಳನ್ನು ಪ್ರತಿದಿನದ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದರು. ಮಂಗಳೂರು ರೈಲು ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ, ಮಂಗಳೂರು–ಸುಬ್ರಹ್ಮಣ್ಯ ನಡುವೆ ರೈಲುಗಳ ವೇಗ ಹೆಚ್ಚಿಸಲು, ಕ್ರಮ ಕೈಗೊಳ್ಳಲಾಗುತ್ತಿದೆ ಎಂದು, ಸಚಿವ ಸೋಮಣ್ಣ ನುಡಿದರು.

<><><>

**ಹೊಸ** ದಿಲ್ಲಿಯ ಕೆಂಪುಕೋಟೆ ಮೈದಾನದಲ್ಲಿ ಇಂದು, ಬುಡಕಟ್ಟು ಸಮುದಾಯಗಳ ಜನಜಾತೀಯ ಸಾಂಸ್ಕೃತಿಕ ಸಮಾಗಮ ಆಯೋಜಿತವಾಗಿದೆ. ಕರ್ನಾಟಕ ಸೇರಿದಂತೆ, ವಿವಿಧ ರಾಜ್ಯಗಳಿಂದ, 500 ಬುಡಕಟ್ಟು ಸಮುದಾಯಗಳ ಪ್ರತಿನಿಧಿಗಳು, ಸಾಂಪ್ರದಾಯಿಕ ಪೋಷಾಕು ತೊಟ್ಟು ಪಾಲ್ಗೊಳ್ಳಲಿದ್ದಾರೆ. ಸಾಂಸ್ಕೃತಿಕ ಪರಂಪರೆಯನ್ನು ಗೌರವಿಸಿ, ಸಂಭ್ರಮಿಸುವ ಉದ್ದೇಶದೊಂದಿಗೆ, ಒಂದೂವರೆ ಲಕ್ಷ, ವನವಾಸಿಗರು ಸಮಾವೇಶಗೊಳ್ಳಲಿದ್ದಾರೆ.

<><><>

**ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ – ಇಸ್ರೋ,** ಬೆಂಗಳೂರಿನ ಯು.ಆರ್.ರಾವ್ ಉಪಗ್ರಹ ಕೇಂದ್ರದಲ್ಲಿ, 10ನೇ ತರಗತಿ ವಿದ್ಯಾರ್ಥಿಗಳಿಗೆ, ಬಾಹ್ಯಾಕಾಶ ವಿಜ್ಞಾನದ ಕುರಿತು, ಮಾಹಿತಿ ನೀಡಲು ಆಯೋಜಿಸಿದ್ದ, 6ನೇ ಯುವಿಕ–ಯುವ ವಿಜ್ಞಾನಿ ಕಾರ್ಯಕ್ರಮದಲ್ಲಿ, ಕಲಬುರಗಿ ಜಿಲ್ಲೆ, ಅಜಾದಪುರ, ಎಸ್.ಆರ್.ಎಮ್ ಮೆಹ್ತಾ ಸಿ.ಬಿ.ಎಸ್.ಇ ಶಾಲೆ ವಿದ್ಯಾರ್ಥಿನಿ, ತನ್ವಿ ಚೈತನ್ಯ ಕೊಠಾರಿ ಪಾಲ್ಗೊಂಡಿದ್ದರು. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ....

<><><>

ತನ್ವಿ ಧ್ವನಿ–38 ಸೆಕೆಂದುಗಳು

<><><>

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(37 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

**ಪೆಟ್ರೋಲ್ ದರ, ಪ್ರತಿ ಲೀಟರಿಗೆ 87 ಪೈಸೆ,** ಡೀಸೆಲ್ ಪ್ರತಿ ಲೀಟರ್‌ಗೆ, 91 ಪೈಸೆಯಷ್ಟು ಹಾಗೂ ಸಿ.ಎನ್.ಜಿ ದರ, ಪ್ರತಿ ಕಿಲೋಕ್ಕೆ, 1 ರೂಪಾಯಿಯಷ್ಟು ಏರಿಕೆಯಾಗಿದೆ. ಪರಿಷ್ಕೃತ ದರ, ನಿನ್ನೆಯಿಂದ ಜಾರಿಗೊಂಡಿದೆ. ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ, ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯಿಸಿ, ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ, ಜನಪರ ಕಳಜಿ ಇದ್ದರೆ, ತನ್ನ ಪಾಲಿನ ಪೆಟ್ರೋಲ್ ಹಾಗೂ ಡೀಸೆಲ್ ಸುಂಕ ಇಳಿಸಲಿ ಎಂದು, ಆಗ್ರಹಿಸಿದ್ದಾರೆ.

<><><>

**‘ಕಳಂಕ ನಿವಾರಿಸು; ತಿಳಿವಳಿಕೆ ಬೆಳೆಸು’ ಧ್ಯೇಯದೊಂದಿಗೆ,** ಇಂದು, ವಿಶ್ವ ಸ್ಕಿಜೋಫ್ರೇನಿಯಾ, ಜಾಗೃತಿ ದಿನ. ಸಂಕೀರ್ಣ ಮನೋ ಆರೋಗ್ಯ ಸ್ಥಿತಿಯ ಬಗ್ಗೆ, ಜನ ಜಾಗೃತಿ ಮೂಡಿಸಲು, ಈ ದಿನ ಮೀಸಲು. ವಿಶ್ವ ಆರೋಗ್ಯ ಸಂಸ್ಥೆ ವರದಿಗಳ ಪ್ರಕಾರ, ವಿಶ್ವಾದ್ಯಂತ 2 ಕೋಟಿ 1 ಲಕ್ಷಕ್ಕಿಂತಲೂ ಅಧಿಕ ಜನ. ಸ್ಕಿಜೋಫ್ರೇನಿಯಾದಿಂದ ಬಾಧಿತರಾಗಿದ್ದಾರೆ. ಧಾರವಾಡ ಮನೋ ಆರೋಗ್ಯ ಹಾಗೂ ನರ ವಿಜ್ಞಾನಗಳ ಸಂಸ್ಥೆಯ, ಪ್ರಾಧ್ಯಾಪಕ, ಡಾಕ್ಟರ್ ರಾಘವೇಂದ್ರ ಪಾಟೀಲ, ಸ್ಕಿಜೋಫ್ರೇನಿಯಾ ಕುರಿತು, ಮಾಹಿತಿ ನೀಡಿದ್ದಾರೆ.

<><><>

ರಾಘವೇಂದ್ರ ಪಾಟೀಲ್ ಧ್ವನಿ– 34 ಸೆಕೆಂದುಗಳು

<><><>

**ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು,** ಚಿಪ್ಪಳ್ಳಿ ಗ್ರಾಮದ ಶ್ರಾವ್ಯಾ ಸಾಗರ ನಿರ್ಮಿಸಿದ, ವರದಾ ನದಿ ಜೀವವೈವಿಧ್ಯ ಸಾಕ್ಷ್ಯಚಿತ್ರ, ರಾಜ್ಯ ಜೀವವೈವಿಧ್ಯ ಮಂಡಳಿಯ, 2025–26ನೇ ಸಾಲಿನ, ಅತ್ಯುತ್ತಮ ಸಾಕ್ಷ್ಯಚಿತ್ರ

ಪ್ರಶಸ್ತಿಗೆ ಭಾಜನವಾಗಿದೆ. ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ಬೆಂಗಳೂರಿನಲ್ಲಿ ಪ್ರಶಸ್ತಿ ನೀಡಿ, ಗೌರವಿಸಿದರು. ಪ್ರದೇಶ ಸಮಾಚಾರಕ್ಕಾಗಿ, ಶ್ರಾವ್ಯಾ ಸಾಗರ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಶ್ರಾವ್ಯಾ ಸಾಗರ ಧ್ವನಿ– 42 ಸೆಕೆಂದುಗಳು**

<><><>

**ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಪ್ರತಿನಿಧಿಗಳು,** ಸೂರತ್ ಮಹಾನಗರ ಪಾಲಿಕೆ ಹಾಗೂ ದೇಶದ ಅತೀ ದೊಡ್ಡ, 140 M.L.D. ಸಾಮರ್ಥ್ಯದ ಒಳಚರಂಡಿ ನೀರು ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿ, ಮಾಹಿತಿ ಪಡೆದರು. ವಾರ್ಷಿಕ 60 ಕೋಟಿ ಲಾಭ ಗಳಿಸುತ್ತಿರುವ, ಘಟಕದ ಕಾರ್ಯವೈಖರಿ ಕುರಿತು, ಸೂರತ್ ಪಾಲಿಕೆಯ ಕಾರ್ಯನಿರ್ವಾಹಕ ಅಭಿಯಂತರ, ಪರೇಶ ಪಟೇಲ, ನಿಯೋಗಕ್ಕೆ ಮಾಹಿತಿ ನೀಡಿದರು.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

**ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್,** ರಾಜ್ಯಕ್ಕೆ ಭೇಟಿ ನೀಡಿದ್ದು, ಇಂದು ಬೆಂಗಳೂರು ಉತ್ತರ ಜಿಲ್ಲೆ, ಕಾರ್ಯಕರ್ತರ ಪ್ರಶಿಕ್ಷಣ ವರ್ಗದಲ್ಲಿ ಪಾಲ್ಗೊಳ್ಳಲಿದ್ದಾರೆ.

**ರಾಜ್ಯ ಮಟ್ಟದ ಚೆಸ್ ಪಂದ್ಯಾವಳಿ,** ಕೋಲಾರ ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ, ಇಂದು ನಗರದ ಯುವಜನ ಸೇವಾ ಇಲಾಖೆಯ, ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿತವಾಗಿದೆ.

**ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ,** ಧರೆ ಫೌಂಡೇಶನ್ ಸಹಯೋಗದಲ್ಲಿ, ಐದು ಲಕ್ಷ ಗಿಡಗಳನ್ನು ನೆಡಲಾಗುತ್ತಿದೆ ಎಂದು, ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ, ಹಂಚಾಟೆ ಸಂಜೀವಕುಮಾರ ತಿಳಿಸಿದ್ದಾರೆ.

**ಚಿಕ್ಕಮಗಳೂರಿನ ಕೈ ಕಸೂತಿ** ಪ್ರವೀಣೆ ಎಂ.ಎಸ್.ಸುಕನ್ಯಾ, ಮಲೇಷಿಯಾದ ವಿಶ್ವ ಫ್ಯಾಷನ್ ವಿಶ್ವವಿದ್ಯಾಲಯದ, ಡಾಕ್ಟರೇಟ್ ಪದವಿಗೆ ಭಾಜನರಾಗಿದ್ದಾರೆ.

**ಚಾಮರಾಜನಗರ ಜಿಲ್ಲೆ, ಬಿಳಿಗಿರಿರಂಗನಾಥಸ್ವಾಮಿ** ಹುಲಿ ಸಂರಕ್ಷಿತ ಅರಣ್ಯದ, ಯಳಂದೂರು ವನ್ಯಜೀವಿ ವಲಯದಲ್ಲಿ, ಕಂಡು ಬಂದ, ಆನೆ ಕಳೇಬರದ ಅಂಗಾಂಗಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದಾಗಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಮಂಜುನಾಥ ತಿಳಿಸಿದ್ದಾರೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

**ಫಿಟ್ ಇಂಡಿಯಾ ಸಂಡೇಸ್ ಆನ್ ಬೈಸಿಕಲ್;** ಧಾರವಾಡ ಸೇರಿದಂತೆ, ದೇಶದ 8 ಸಾವಿರ ಸ್ಥಳಗಳಲ್ಲಿ ಇಂದು, ಜನ ಜಾಗೃತಿ ಜಾಥಾ.

**81ಕ್ಕೂ ಹೆಚ್ಚು, ಉದ್ಯೋಗ ವಲಯಗಳ,** ಅಸಂಘಟಿತ ಹಾಗೂ ಗಿಗ್ ಕಾರ್ಮಿಕರಿಗೆ, ರಾಜ್ಯ ಸರ್ಕಾರದಿಂದ, ಶೇಕಡ 60 ರಷ್ಟು ವೇತನ ಹೆಚ್ಚಳ.

**ಹೊಸ ದಿಲ್ಲಿಯ ಕೆಂಪುಕೋಟೆಯಲ್ಲಿ ಇಂದು,** ವನವಾಸಿಗಳ, ಜನಜಾತೀಯ ಸಾಂಸ್ಕೃತಿಕ ಸಮಾಗಮ.

**'ಕಳಂಕ ನಿವಾರಿಸು; ತಿಳಿವಳಿಕೆ ಬೆಳೆಸು' ಧ್ಯೇಯದೊಂದಿಗೆ,** ಇಂದು, ವಿಶ್ವ ಸ್ಕಿಜೋಫ್ರೇನಿಯಾ, ಜಾಗೃತಿ ದಿನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>